**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 30.05.2021.**

**1] ಮನಗೂಳಿ ಪೊಲೀಸ ಠಾಣೆ ಗುನ್ನಾ. ನಂ: 69/2021 ಕಲಂ: 279. 304(ಎ) ಐ.ಪಿ.ಸಿ.**

ದಿನಾಂಕ: 28.05.2021 ರಂದು 21.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ: ವಿಠ್ಠಲ ಮಲ್ಲಪ್ಪ ಬಳ್ಳಾರಿ ವಯಾ 45 ವರ್ಷ ಸಾ॥ ಜುಮನಾಳ ಹಾ॥ವ॥ ಕಾರಜೋಳ. ಮೋಟರ್ ಸೈಕಲ್ ನಂ: ಕೆ.ಎ.28 ಕೆ 5415 ನೇದ್ದರ ಸವಾರ. ಈತನು ತನ್ನ ಮಾಲಿಕತ್ವದ ಟಿ.ವ್ಹಿ.ಎಸ್. ಕಂಪನಿಯ ಮೋಟರ್ ನೇದ್ದನ್ನು ಮುಳವಾಡ ಸೀಮೆಯ ಹಾಯ್ದು ಎನ್‌ಎಚ್‌–52 ರಸ್ತೆಯ ಕಡೆಯಿಂದ ಮುಳವಾಡ ಗ್ರಾಮಕ್ಕೆ ಹೋಗುವ ಒಳ ಸಾರ್ವಜನಿಕ ರಸ್ತೆಯ ಮಸೀದಿ ಹತ್ತಿರ ಮುಳವಾಡ ಕಡೆಗೆ ಅತೀ ವೇಗದಿಂದ ಅಜಾಗರೂಕತೆಯಿಂದ ನಡೆಯಿಸಿ ರಸ್ತೆಯ ಬದಿಯ ಕಲ್ಲಿಗೆ ಹಾಯಿಸಿ ನಿಯಂತ್ರಣ ತಪ್ಪಿಸಿ ತಾನು ನಡೆಸುತ್ತಿದ್ದ ಮೋಟರ್ ಸೈಕಲನ್ನು ರಸ್ತೆಯ ವಿದ್ಯುತ್ತ್ ಕಂಬಕ್ಕೆ ಹಾಯಿಸಿ ಅಪಘಾತ ಮಾಡಿ ವಿದ್ಯುತ್ತ ಕಂಬ ತಲೆಗೆ ಹಾಗೂ ಹಣೆಗೆ ಮತ್ತು ಎಡ ಮುಂಡಿಗೆ ಬಡಿಯುವಂತೆ ಮೋಟರ್ ಸೈಕಲ್ ನಡೆಯಿಸಿ ತನ್ನ ತಲೆಗೆ ಹಣೆಗೆ ಎಡಮುಂಡಿಗೆ ಭಾರಿ ರಕ್ತ ಗಾಯ ಹೊಂದಿ ಸ್ಥಳದಲ್ಲಿ ಮರಣ ಹೊಂದಿರುತ್ತಾನೆ ಅಂತಾ ಪಿರ್ಯಾದಿದಾರಳ ಪಿರ್ಯಾದದಲ್ಲಿ ವಗೈರೆ ನಮೂದು ಅದೆ. ಈ ಬಗ್ಗೆ ಶ್ರೀಮತಿ ಮಾಯವ್ವ ವಿಠ್ಠಲ ಬಳ್ಳಾರಿ, ಸಾ॥ಜುಮನಾಳ ಹಾ॥ವ॥ ಕಾರಜೋಳ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.05.2021 ರಂದು ಮನಗೂಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮುದ್ದೇಬಿಹಾಳ ಪೊಲಿಸ್ ಠಾಣೆ ಗುನ್ನಾ. ನಂ: 96/2021 ಕಲಂ: 279. 304(ಎ) ಐ.ಪಿ.ಸಿ.**

ದಿನಾಂಕ: 29.05.2021 ರಂದು 00.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಮೃತ: ಮುರ್ತುಜ ಖಾಜೇಸಾಬ ಇಲಕಲ್ಲ ಸಾ: ಸೂಳೇಬಾವಿ, ತಾ: ಹುನಗುಂದ ಟಿಪ್ಪರ ನಂಬರ ಕೆಎ:32 ಸಿ:2874 ನೇದ್ದರ ಚಾಲಕ ಈತನು ತಾನು ನಡೆಸುತ್ತಿದ್ದ ಟಿಪ್ಪರ ನೆದ್ದನ್ನು ತಗೆದುಕೊಂಡು ಸೂಳೇಬಾವಿಯಿಂದ ಮುದ್ದೇಬಿಹಾಳ ತಾಲೂಕಿನ ಆಲಕೊಪ್ಪರಕ್ಕೆ ಕಡಿ ತುಂಬಿಕೊಂಡು ಬರಲು ಹೋದಾಗ ರೂಡಗಿ ಹತ್ತಿರ ಟಿಪ್ಪರದಲ್ಲಿ ಸೌಂಡ ಬರಲಿಕ್ಕೆ ಹತ್ತಿದ್ದರಿಂದ, ರೂಡಗಿ ಹತ್ತಿರ ಟಿಪ್ಪರನ್ನು ನಿಲ್ಲಿಸಿ ಕೆಳಗಿಳಿದು ಚೆಕ್ ಮಾಡುತ್ತಿದ್ದಾಗ ನಿಷ್ಕಾಳಜಿತನದಿಂದ ಟಿಪ್ಪರನ್ನು ಸರಿಯಾಗಿ ಹ್ಯಾಂಡ ಬ್ರೆಕ್ ಹಾಕಿ ನಿಲ್ಲಿಸಿದೆ ಇದ್ದುದ್ದರಿಂದ ಟಿಪ್ಪರ ನಿಂತ ರೋಡ್ ಹಿಂದಕ್ಕೆ ಸ್ವಲ್ಪ ಇಳಿಜಾರು ಇದ್ದರಿಂದ ಟಿಪ್ಪರ ಹಿಂದಕ್ಕೆ ಚಲಿಸಿ ನನ್ನ ಮುರ್ತುಜ ಇಲಕಲ್ಲ ಇವನಿಗೆ ಹಾಯ್ದು ಅಪಘಾವಾಗಿ ಅವನ ಬಲಕಿನ ತೊಡೆಗೆ, ಎರಡು ಮೊಳಕಾಲಿಗೆ, ಸೊಂಟಕ್ಕೆ, ಬಲಗೈಗೆ ಭಾರಿ ಗಾಯಪೆಟ್ಟುಗಳು ಆಗಿದ್ದು, ಅವನಿಗೆ ಉಪಚಾರ ಕುರಿತು ಬಾಗಲಕೋಟ ಕಟ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಉಪಚಾರ ಮಾಡಿಸಿ, ಇನ್ನೂ ಹೆಚ್ಚಿನ ಉಪಚಾರ ಕುರಿತು ಬಾಗಲಕೋಟ ಕುಮಾರೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿ ಉಪಚಾರ ಮಾಡಿಸುತ್ತಿದ್ದಾಗ ಉಪಚಾರ ಫಲಿಸದೆ ನಸುಕಿನ 04.15 ಗಂಟೆಗೆ ತೀರಿಕೊಂಡಿರುತ್ತಾನೆ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ನನ್ನ ಫಿರ್ಯಾದಿ ಇರುತ್ತದೆ ಅಂತಾ ವಗೈರೆ ಪಿರ್ಯಾದಿದಾರನ ಪಿರ್ಯಾದಿಯಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಖಾಜೇಸಾಬ ರಾಜೇಸಾಬ ಇಲಕಲ್ಲ ಸಾ: ಸೂಳೇಬಾವಿ, ತಾ: ಹುನಗುಂದ, ಜಿ: ಬಾಗಲಕೋಟ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.05.2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಜಲನಗರ ಪೊಲಿಸ್ ಠಾಣೆ ಗುನ್ನಾ. ನಂ: 24/2021 ಕಲಂ: ಮನುಷ್ಯ ಕಾಣೆ**

ದಿನಾಂಕ: 20.03.2021 ರಂದು ಬೆಳಿಗ್ಗೆ 10.15 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಅಮೀತ ಚಂದ್ರಕಾಂತ ಪುಲಾರಿ ವಯಾ: 33 ವರ್ಷ, ಜಾತಿ: ಹಿಂದೂ–ನಾವಿ, ಸಾ: ಮುರಾಜಿ ಪೇಟ ಬಿಲ್ಡಿಂಗ್ ಹತ್ತಿರ ಗುಂಡಾ ಕಿರಾಣಿ ಅಂಗಡಿ ಸೋಲಾಪೂರ ಹಾ:ವ: ವಿಜಯಪುರ ಕನ್ನಾನ ನಗರ ಇವನು ನನ್ನ ಅಣ್ಣನ ಸ್ವಾಪ್ ಎನ್ ಸ್ಟೈಲ್ ಅಂಗಡಿಯಿಂದ ಸೊಲಾಪೂರಕ್ಕೆ ಹೋಗುತ್ತೇನೆ ಅಂತಾ ಹೇಳಿ ಸೋಲಾಪುರಕ್ಕೂ ಹೋಗದೆ ವಾಪಸ್ಸ ಮನೆಗೂ ಬರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ. ನಾನು ನನ್ನ ಗಂಡನನ್ನು ಇಲ್ಲಿಯವರೆಗೆ ಹುಡಕಾಡಿ ಸಿಗಲಾರದಕ್ಕೆ ಈಗ ಬಂದು ಫಿರ್ಯಾದಿ ಕೊಡಲು ತಡವಾಗಿರುತ್ತದೆ ಅಂತಾ ವಗೈರೆ ಫಿರ್ಯಾದಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಶ್ರೀಮತಿ ಪುಷ್ಪಾ ಅಮೀತ ಪುಲಾರಿ, ಸಾ॥ ಮುರಾಜಿ ಪೇಟ ಬಿಲ್ಡಿಂಗ್ ಹತ್ತಿರ ಗುಂಡಾ ಕಿರಾಣಿ ಅಂಗಡಿ ಸೋಲಾಪೂರ ಹಾಲಿ ವಾಸ: ವಿಜಯಪುರ ಕನ್ನಾನ ನಗರ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 29.05.2021 ರಂದು ಜಲನಗರ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಹೊರ್ತಿ ಪೊಲಿಸ್ ಠಾಣೆ ಗುನ್ನಾ. ನಂ: 69/2021 ಕಲಂ: ಮಹಿಳೆ ಕಾಣೆ**

ದಿನಾಂಕ: 26.05.2021 ರಂದು ಮದ್ಯಾಹ್ನ 03:00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಶಿಲ್ಪಾ ತಂ ಚಂದ್ರಶೇಖರ ಮದಾಳೆ ವಯಾ 19 ವರ್ಷ ಸಾ॥ ಘನವಲಗಾ ತಾ॥ ಇಂಡಿ ಇವಳು ಮನೆಯಿಂದ ಹೊರಗಡೆ ಹೋದವಳು ಸಾಯಂಕಾಲ 06:00 ಗಂಟೆಯ ವರೆಗೆ ಮರಳಿ ಮನೆಗೆ ಬಾರದ್ದರಿಂದ ಅವಳಿಗೆ ಪಿರ್ಯಾದಿ ಹಾಗೂ ಅವರ ಮನೆಯ ಜನರು ಊರಲ್ಲಿ ಹಾಗೂ ಅಕ್ಕ ಪಕ್ಕದ ವಸ್ತಿಗಳಲ್ಲಿ ಹಾಗೂ ಅಡವಿಯಲ್ಲಿ ಹುಡುಕಾಡಿದ್ದು ಸಿಕ್ಕಿರುವದಿಲ್ಲ. ಅಂತಾ ವಗೈರೆ ವಿಷಯ ಪಿರ್ಯಾದದಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಚಂದ್ರಶೇಖರ ರಾಮಣ್ಣ ಮದಾಳೆ ಸಾ॥ ಘನವಲಗಾ ತಾ॥ ಇಂಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 29.05.2021 ರಂದು ಹೊರ್ತಿ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.